**<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾಗರಾಜು ಇವರು ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ:114ಕ್ಕೆ ಮಾನ್ಯ ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಉತ್ತರ:</u>**

**<u>ಪ್ರಶ್ನೆ:</u>**

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಿಂದ ಮುಂದಿನ ದಿನಗಳಲ್ಲಿ ಹವಾನಿಯಂತ್ರಿತ ಡಬ್ಬಲ್ ಡೆಕ್ಕರ್ ವಿದ್ಯುತ್ ಚಾಲಿತ ಇ-ಬಸ್ಸುಗಳನ್ನು ಪ್ರಸ್ತುತ ಚಾಲ್ತಿಯಲ್ಲಿರುವ ವಜ್ರ ಬಸ್ (ವೋಲ್ವೋ ಎ.ಸಿ) ಬಸ್‌ಗಳ ದರದಲ್ಲಿ ಕಾರ್ಯಾಚರಣೆ ಮಾಡಲು ಉದ್ದೇಶಿಸಿರುವುದು ನಿಮ್ಮ ಗಮನಕ್ಕೆ ಬಂದಿದೆಯೇ ಹಾಗೂ ಈಗಾಗಲೇ ನಷ್ಟದ ಸುಳಿಯಲ್ಲಿ ಸಿಲುಕಿರುವ ಬೆಂ.ಮ.ಸಾ.ಸಂಸ್ಥೆಗೆ ಈ ಎಸಿ ಡಬಲ್ ಡೆಕ್ಕರ್ ಬಸ್‌ಗಳ ಕಾರ್ಯಾಚರಣೆ ಮತ್ತಷ್ಟು ನಷ್ಟವುಂಟು ಮಾಡುವುದಲ್ಲದೆ (ಈಗಾಗಲೇ ನಗರದಲ್ಲಿ ಹಲವಾರು ವೋಲ್ವೋ ಎಸಿ ಬಸ್‌ಗಳು ಪ್ರಯಾಣಿಕರ ದಟ್ಟಣೆಯಿಲ್ಲದೆ ಖಾಲಿ ಕಾರ್ಯಾಚರಣೆಗೊಳ್ಳುತ್ತಿದೆ) ಇದರಿಂದ ಸಾರ್ವಜನಿಕರ ತೆರಿಗೆ ಹಣದಲ್ಲಿ ಖರೀದಿಸುವ ಈ ಬಸ್‌ಗಳ ಅಗತ್ಯತೆ ಪ್ರಸ್ತುತ ಸನ್ನಿವೇಶದಲ್ಲಿ ಏನಿದೆ? ಮತ್ತು ಈ ಎಸಿ ಡಬಲ್ ಡೆಕ್ಕರ್ ಬಸ್‌ಗಳ ಅನುಕೂಲವನ್ನು ಎಲ್ಲಾ ವರ್ಗದ ಜನರು ಪಡೆಯುವಂತಾಗಲು ಒಂದು ಭಾಗವನ್ನು (ಕೆಳಗಿನ ಫ್ಲೋರ್ ಅಥವಾ ಮೇಲಿನ ಫ್ಲೋರ್) ನಾನ್-ಎಸಿಯಾಗಿ ಪರಿವರ್ತಿಸಿ ಡಬಲ್ ಡೆಕ್ಕರ್ ಬಸ್ ಆಚರಣೆಗೊಳಿಸಿದರೆ ಸಾಮಾನ್ಯ ವರ್ಗದ ಜನರು ಸಾಮಾನ್ಯ ದರದಲ್ಲಿ ಪ್ರಯಾಣಿಸಬಹುದು ಈ ಕುರಿತು ನಿಯಮ-72ರಲ್ಲಿ ಮಾನ್ಯ ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**<u>ಉತ್ತರ:</u>**

ಬೆಂಗಳೂರು ನಗರದ ಸಂಚಾರ ದಟ್ಟಣೆಯನ್ನು ಕಡಿಮೆಗೊಳಿಸುವ ದೃಷ್ಟಿಯಿಂದ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ನಗರ ಭೂಸಾರಿಗೆ ನಿರ್ದೇಶನಾಲಯವು (DULT) ರಾಜ್ಯ ನಗರ ಸಾರಿಗೆ ನಿಧಿ (SUTF) ಅಡಿ ಒದಗಿಸುತ್ತಿರುವ ರೂ.10.00 ಕೋಟಿ ವೆಚ್ಚದಲ್ಲಿ 05 ಡಬಲ್ ಡೆಕ್ಕರ್ ಹವಾನಿಯಂತ್ರಿತ ಎಲೆಕ್ಟ್ರಿಕ್ ಬಸ್ಸುಗಳನ್ನು ಖರೀದಿಸಲು ಹಾಗೂ ನಗರಾಭಿವೃದ್ಧಿ ಇಲಾಖೆಯು NCAP ಯೋಜನೆಯಡಿ ಒದಗಿಸುತ್ತಿರುವ ರೂ.10.00 ಕೋಟಿ ವೆಚ್ಚದಲ್ಲಿ 05 ಡಬಲ್ ಡೆಕ್ಕರ್ ಹವಾನಿಯಂತ್ರಿತ ಎಲೆಕ್ಟ್ರಿಕ್ ಬಸ್ಸುಗಳನ್ನು ಖರೀದಿಸಲು ಎಲ್ಲಾ ತಾಂತ್ರಿಕ ವಿಶೇಷಣಗಳನ್ನು (Technical Specifications) ಅಂತಿಮಗೊಳಿಸಿ ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಪ್ರಸ್ತುತ ಎಲೆಕ್ಟ್ರಿಕ್ ಡಬಲ್ ಡೆಕ್ಕರ್ (Double-Decker) ಬಸ್ಸುಗಳ ದರಗಳನ್ನು ನಿಗದಿಪಡಿಸಿರುವುದಿಲ್ಲ, ಸದರಿ ಬಸ್ಸುಗಳ ಖರೀದಿಯ ನಂತರ ಸಾರ್ವಜನಿಕ ಪ್ರಯಾಣಿಕರಿಗೆ ಅನುಕೂಲವಾಗುವಂತೆ ದರಗಳನ್ನು ನಿಗದಿಪಡಿಸಲಾಗುವುದು.

ಸಂಖ್ಯೆ: ಟಿಡಿ 68 ಟಿಸಿಕ್ಯೂ 2023

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು